


## ಕಾಡುಗೊಲ್ಲರು ಕಂಡ ಎಣ್ಣೆ ಕಾಯಿ

ಚಿತ್ರದುರ್ಗದ ಹಿರಿಯೂರು ತಾಲ್ಲೂಕಿನ ಯರಬಳ್ಳಿಯ ದೊಡ್ಡ ಕಾಡುಗೊಲ್ಲರಹಟ್ಟಿಯಲ್ಲಿ ಕಾಡುಗೊಲ್ಲರು ತಮ್ಮ ಎಲ್ಲ ಪೂಜಾ ವಿಧಾನಗಳಲ್ಲೂ ಪುರಾತನ ಕಾಲದಲ್ಲಿ ಬಳಕೆಯಲ್ಲಿದ್ದ ಎಣ್ಣೆ ಮಗೆಯನ್ನು ಬಳಸುತ್ತಾರೆ. ಚಿತ್ರದಲ್ಲಿ ಕಾಣುತ್ತಿರುವುದೂ ಇದೇ. ಕಂಚಿನ ಲೋಹದಲ್ಲಿ ಮಾಡಿರುವ ಈ ಅಪರೂಪದ ಮಗೆಯನ್ನು ಕಾಡುಗೊಲ್ಲರು 'ಎಣ್ಣೆ ಕಾಯಿ' ಎಂದು ಕರೆಯುತ್ತಾರೆ. ಸುಮಾರು 250 ವರ್ಷಕ್ಕೂ ಹಿಂದಿನ ಈ ಎಣ್ಣೆ ಕಾಯಿ ನೋಡಲು ಆಕರ್ಷಕವಾಗಿದ್ದು, ಚಿತ್ತಾರಗಳಿಂದ ಕೂಡಿದೆ. ಇಂದಿಗೂ ಈ ಎಣ್ಣೆ ಕಾಯಿ ಬಳಕೆಯಲ್ಲಿದೆ ಎಂದು ಪೂಜಾರಿ ನಿಜಲಿಂಗಮೂರ್ತಿ ತಿಳಿಸಿದರು.

—ಎನ್.ಆರ್. ತಿಪ್ಪೇಸ್ವಾಮಿ ಚಿಕ್ಕಹಳ್ಳಿ, ಚಳ್ಳಕೆರೆ

## ಅಲೊವೆರಾ ಹೂವು ಬಿಟ್ಟಾಗ...



ಅಲೊವೆರಾ ಸಸ್ಯಗಳು ಔಷಧೀಯ ಗುಣಲಕ್ಷಣಗಳಿಗೆ ಹೆಸರುವಾಸಿ. ಆದರೆ ಅವು ಸುಂದರವಾದ ಹೂವುಗಳನ್ನು ಸಹ ಬಿಡಬಹುದು ಎಂದು ನನಗೆ ತಿಳಿದಿರಲಿಲ್ಲ. ನಮ್ಮ ಮನೆಯ ಅಲೊವೆರಾ, ಹೂವು ಬಿಟ್ಟಾಗಲೇ ಅದು ಗೊತ್ತಾಗಿದ್ದು. ಕುತೂಹಲದಿಂದ ಅಂತರ್ಜಾಲದಲ್ಲಿ ಹುಡುಕಿದಾಗ ತಿಳಿದಿದ್ದು, ಅಲೊವೆರಾ ಸಸ್ಯಗಳು ಸಾಮಾನ್ಯವಾಗಿ ಬೇಸಿಗೆಯ ತಿಂಗಳುಗಳಲ್ಲಿ ಸಾಕಷ್ಟು ಸೂರ್ಯನ ಬೆಳಕು, ನೀರು ಮತ್ತು ಪೋಷಕಾಂಶಗಳನ್ನು ಪಡೆದಾಗ ಅರಳುತ್ತವೆ.

ಮಿತವಾಗಿ ನೀರು ಹಾಕಬೇಕು, ನೀರಿಲ್ಲಿನ್ನು ಸಂಪೂರ್ಣ ಒಣಗಲು ಬಿಡಬೇಕು, ಪ್ರತಿ 2–3 ವರ್ಷಗಳಿಗೊಮ್ಮೆ ಹೂವಿನ ಕುಂಡ ಬದಲಿಸಬೇಕು ಹಾಗೂ ದಿನಕ್ಕೆ ಕನಿಷ್ಠ 4–6 ಗಂಟೆಗಳ ಕಾಲ ಬಿಸಿಲನ್ನು ಪಡೆದಾಗ ಹೂವು ಅರಳುತ್ತವೆ. ಅಲೊವೆರಾ ಸಾಮಾನ್ಯವಾಗಿ ಕಿತ್ತಳೆ, ಕೆಂಪು, ಹಳದಿ ಮತ್ತು ಗುಲಾಬಿ ಬಣ್ಣದಲ್ಲಿ ಕೊಳವೆಯಾಕಾರದ ಹೂವುಗಳನ್ನು ಬಿಡುತ್ತವೆ. ಅವು ಎರಡು ಅಡಿ ಎತ್ತರದವರೆಗೂ ಬೆಳೆಯಬಹುದು. ನಾವು ಇದಕ್ಕೆ ಯಾವುದೇ ವಿಶೇಷ ಆರೈಕೆ ಮಾಡಿರಲಿಲ್ಲ. ಆದರೂ ಹೂವು ಅರಳಿ ನಿಂತಾಗ ಆದ ಖುಷಿ ಅಷ್ಟಿಷ್ಟಲ್ಲ.

—ಉಮೇಶ್, ನಿಟ್ಟೂರು

## ಮರುಭೂಮಿಯಲ್ಲೊಂದು ಆಮೆ

ಈ ವರ್ಷದ ಭಾರಿ ಮಳೆಯು ಅನೇಕ ತೊಂದರೆ ತಂದೊಡ್ಡುವುದರ ಜೊತೆಗೆ ಅನಿರೀಕ್ಷಿತ ಘಟನೆಗಳನ್ನು ಸೃಷ್ಟಿಸಿರುವುದರಲ್ಲಿ ಅನುಮಾನವಿಲ್ಲ. ಇದಕ್ಕೆ ಸಾಕ್ಷಿ ಎಂಬಂತೆ ಕಂಡಿದ್ದು ರಾಜಸ್ಥಾನದ ಅಜ್ಮೀರ್‌ನಲ್ಲಿ ಈ ಬಾರಿಯ ಭಾರಿ ಮಳೆಯಲ್ಲಿ ಮಿಂದೇಳುತ್ತಿದ್ದ ಈ ಚೆಂದದ ಆಮೆ. ನಾನು ಅಪ್ಪಟ ಮಲೆನಾಡಾದ ಶಿವಮೊಗ್ಗದಲ್ಲಿ ಹುಟ್ಟಿ ಬೆಳೆದವನಾದರೂ ಮಳೆಗಾಲದಲ್ಲಿ ಸುರಿಯುವ ಧಾರಾಕಾರ ಮಳೆಗೆ ಇಂತಹ ಆಮೆಗಳು ರಸ್ತೆಗಿಳಿಯುವುದನ್ನು ಇದುವರೆಗೂ ಕಂಡಿರಲಿಲ್ಲ. ಜೊತೆಗೆ ರಾಜಸ್ಥಾನದಂತಹ ನಾಡಲ್ಲಿ ನಮ್ಮ ಮಲೆನಾಡಿನ ಮಳೆಯನ್ನೂ ನಿರೀಕ್ಷಿಸಿರಲಿಲ್ಲ. ಆದರೆ ಈ ಬಾರಿ ಅಲ್ಲಿನ ಅಜ್ಮೀರ್‌ನಲ್ಲಿ ಸುರಿದ ಮಹಾಮಳೆಗೆ ದಿಕ್ಕುಕಾಣದೆ ರಸ್ತೆಮಧ್ಯ ಗಾಬರಿಯಿಂದ ನಿಂತಿದ್ದ ಈ ಆಮೆರಾಯ. ಈತನ ಚೆಂದದ ಗ್ರಾನೈಟ್‌ನಂತಹ ನುಣುಪಾದ ಮೈಯನ್ನೊಮ್ಮೆ ಸವರಿ, ಪಿಳಿಪಿಳಿ ಹೊಳೆಯುತ್ತಿದ್ದ ಕಣ್ಣುಗಳನ್ನೊಮ್ಮೆ ದಿಟ್ಟಿಸಿ, ಸುರಕ್ಷಿತವಾಗಿ ರಸ್ತೆ ದಾಟಿಸಲಾಯಿತು. ಬದುಕಿದೆಯಾ ಬಡಜೀವ ಎನ್ನುತ್ತಾ ರಭಸದಿಂದ ಆ ಅರೆಮರುಭೂಮಿಯಲ್ಲಿ ತನಗಿಷ್ಟವಾದ ಜಾಗವನ್ನು ಅರಸುತ್ತಾ ಆಮೆರಾಯ ಸಾಗಿದ.

—ಅನಂತ ಎಸ್. ನಾಯಕ್, ಶಿವಮೊಗ್ಗ





## ವೀಣಾಧಾರಿ ಹನುಮಂತ

ಚಿತ್ರದಲ್ಲಿ ಕಾಣುವ ಈ ಸುಂದರ ಪುಟ್ಟ ಮೂರ್ತಿ ಸೋಂದಾ ಮಠದ (ಶಿರಸಿಯ) ಆವರಣದ ಆಕರ್ಷಣೆ. ಯಾವ ದೇವಸ್ಥಾನದಲ್ಲೂ ಕಾಣದ ವೀಣಾಧಾರಿ ಮುಖ್ಯ ಪ್ರಾಣದೇವರು, ಅಂದರೆ ಹನುಮಂತ ದೇವರು ಇಲ್ಲಿ ಪ್ರತಿಷ್ಠಾಪನೆಗೊಂಡಿರುವುದು ವಿಶೇಷ. ಇದನ್ನು ಸ್ಥಾಪಿಸಿದವರು ಭಾವಿ ಸಮೀರ ಎಂದೇ ಪ್ರಸಿದ್ಧರಾದ ಶ್ರೀ ವಾದಿರಾಜ ಯತಿಗಳು. ಹಲವಾರು ಭಕ್ತಿಗೀತೆಗಳನ್ನು ರಚಿಸಿದ ವಾದಿರಾಜರಿಗೆ ಇಂಥ ಮೂರ್ತಿ ಸ್ಥಾಪನೆಯ ವಿಚಾರ ಹೊಳೆದದ್ದು ಆಶ್ಚರ್ಯವೇನಲ್ಲ. ವೀಣೆ ಹಿಡಿದು, ಅರಳಿದ ಕಮಲದ ಆಸನದ ಮೇಲೆ ಕುಳಿತ ಮುಖ್ಯಪ್ರಾಣರ ಜೊತೆ ಶ್ರೀ ವಾದಿರಾಜ ಯತಿಗಳು ಕೈಮುಗಿದು ಕುಳಿತಿರುವ ಮೂರ್ತಿಯನ್ನೂ ಇಲ್ಲಿ ಕಾಣಬಹುದು.

ಅಲ್ಲೇ ಇರುವ ಮತ್ತೊಂದು ಹನುಮಂತನ ಮೂರ್ತಿ ಇತ್ತೀಚಿನದು. ಇದೇ ಆವರಣದಲ್ಲಿ ವಾದಿರಾಜರೇ ಸ್ಥಾಪಿಸಿದ ಕೃಷ್ಣನ ಮೂರ್ತಿ ಇರುವ ಸಣ್ಣ ಗುಡಿಯೂ ಇದೆ. ಸೋಂದಾ ಮಠದ ಇಡೀ ಆವರಣ ಅನೇಕ ಐತಿಹಾಸಿಕ ಸಂಗತಿಗಳಿಂದ ಹಾಗೂ ಆಧುನಿಕ ಬದಲಾವಣೆಗಳಿಂದ ಮತ್ತು ಅನೇಕ ಅಪರೂಪದ ಹೂವಿನ ಗಿಡಗಳಿಂದ ತುಂಬಿ ಮನಕ್ಕೆ ಸಂತೋಷ ನೀಡುತ್ತದೆ.

—ಸ್ಮಿತಾ ಮೈಸೂರ, ಹುಬ್ಬಳ್ಳಿ